ದಿನಾಂಕ : 29.08.2024

ಅಸಲು ದಾವೆ: 54/2011

ಡಿ.ಡಬ್ಲ್ಯೂ: 3

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಹೆಚ್.ಪಿ.ಎಸ್ ರವರಿಂದ :**

ನನ್ನ ತಂದೆಯ ತಾಯಿ 1 ನೇ ವಾದಿ ಗೌರಮ್ಮ ಬದುಕಿದ್ದಾರೆ. ನಿಮ್ಮ ತಂದೆ ಜೀವಿತ ಕಾಲದಲ್ಲಿ ಅವರ ಕಾಲ ನಂತರ ಅವರ ಆಸ್ತಿಗಳು ಇಂತಿಂತವರಿಗೆ ಹೋಗಬೇಕು ಎಂದು ಯಾವುದಾದರೂ ನೊಂದಾಯಿತ ವಿಭಾಗ ಪತ್ರ ಮಾಡಿಕೊಟ್ಟಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಹಾಗಾಗಿ ನಿಮ್ಮ ತಂದೆಯ ಅವಿಭಜಿತ ಭಾಗಾಂಶದಲ್ಲಿ ಅವರ ತಾಯಿಯಾದ 1 ನೇ ವಾದಿಗೂ ಸಹಾ ಭಾಗಾಂಶದ ಹಕ್ಕು ಇದೆ ಎಂದರೆ ಸಾಕ್ಷಿ ಇದು ಸ್ವಯಾರ್ಜಿತ ಆಸ್ತಿ ಎಂದು ಉತ್ತರಿಸುತ್ತಾರೆ.

ನಿಮ್ಮ ತಂದೆ ಬದುಕಿದ್ದಾಗ ಅಸಲು ದಾವೆ 29/2000 ದಾವೆಯ ಪೂರ್ತಿ ತೀರ್ಪನ್ನಾಗಲಿ ಅಥವಾ ಅದರಲ್ಲಿ ಯಾವುದಾದರೂ ಭಾಗವನ್ನಾದರೂ ಆಗಲಿ ಪ್ರಶ್ನಿಸಿ ಮೇಲ್ಮನವಿ ಅಥವಾ ಕ್ರಾಸ್ ಮೇಲ್ಮನವಿ ಸಲ್ಲಿಸಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಆ ರೀತಿ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ನಿಮ್ಮ ತಂದೆ RFA 384/2002 ರ ತೀರ್ಪನ್ನು ಪ್ರಶ್ನಿಸಿ ಯಾವುದೇ ಮೇಲ್ಮನವಿ ಅಥವಾ ಯಾವುದೇ ರೀತಿಯ ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅಸಲು ದಾವೆ 29/2000 ಮತ್ತು RFA 384/2002 ರ ತೀರ್ಪುಗಳು ನಿಮ್ಮ ತಂದೆಗೆ, ಅವರ ನಂತರ ಅವರ ಮಕ್ಕಳಾದ ನಿಮಗೂ ಮತ್ತು ಅವರ ಹೆಂಡತಿಗೂ ಬದ್ದ ಪಡಿಸುತ್ತವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನಿಮ್ಮ ತಾತ ನಂಜಾಚಾರಿಯವರು ಬದುಕಿದ್ದ ಕಾಲಕ್ಕೆ ದಾವಾ ಸ್ವತ್ತುಗಳು ಅವರ ಮತ್ತು ಅವರ ಹಿರಿಯ ಮಗನಾಗದ ನಿಮ್ಮ ತಂದೆ ಪುಟ್ಟಸ್ವಾಮಿಯವರ ಸ್ವಯಾರ್ಜಿತ ಸ್ವತ್ತುಗಳು ಎಂದು ಯಾವುದಾದರೂ ದಾಖಲಾತಿಗಳನ್ನು ಹೇಳಿಕೊಂಡಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಗ್ರಾಮದ ಪಂಚರ ಮುಖಾಂತರ

ಭಾಗ ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ತಾತ ಒಪ್ಪಾರು ಭಾಗವನ್ನು ಬಿಟ್ಟು ಉಳಿದ ಆಸ್ತಿಗಳಲ್ಲಿ ತನಗೆ ಯಾವುದೇ ಭಾಗ ಬೇಡ ಎಂದು ಯಾವುದಾದರೂ ದಾಖಲಾತಿಗಳನ್ನು ಮಾಡಿ ಇಟ್ಟಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ನಮ್ಮ ತಾತ ಬದುಕಿರುವಾಗಲೇ ಸರ್ವೆ ನಂ.36 ಅನ್ನು 'ಎ' ಮತ್ತು 'ಬಿ' ಎಂದು ಭಾಗ ಮಾಡಿ ಹಂಚಿದ್ದಾರೆ ಎಂದು ಹೇಳುತ್ತಾರೆ. ಈ ಮೇಲೆ ಹೇಳಿದ ರೀತಿ ಭಾಗ ಮಾಡಿರುವ ಬಗ್ಗೆ ಯಾವುದಾದರೂ ದಾಖಲಾತಿ ಮಾಡಿದ್ದಾರ ಎಂದರೆ ಸಾಕ್ಷಿ ಅವರು ಬದುಕಿದ್ದಾಗ ಆ ದಾಖಲಾತಿ ಅವರ ಬಳಿ ಇತ್ತು ಎಂದು ಉತ್ತರಿಸುತ್ತಾರೆ. ಅದು ಯಾವ ದಾಖಲಾತಿ ಎಂದರೆ ಸಾಕ್ಷಿ ಆರ್.ಟಿ.ಸಿ, ಎಂ.ಆರ್.23/1992-93 ಎಂದು ಉತ್ತರಿಸುತ್ತಾರೆ. ಎಂ.ಆರ್. ದಾಖಲಾತಿಯಲ್ಲಿ ನಿಮ್ಮ ತಾತನ ಅರ್ಜಿಯಾಗಲಿ, ಅವರ ಸಹಿಯಾಗಲಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಎಂ.ಆರ್.23/1992-93 ಅನ್ನು ನಾನು ಈ ನ್ಯಾಯಾಲಯದಲ್ಲಿ ಹಾಜರು ಮಾಡಿದ್ದೇನೆ. ಸಾಕ್ಷಿ ದಾಖಲಾತಿಗಳನ್ನು ಪರಿಶೀಲಿಸಿ ನೋಡಿ ಮುಂದಿನ ವಾಯಿದೆಯಲ್ಲಿ ಹಾಜರು ಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಅವರ ತಂದೆ ಬದುಕಿದ್ದ ಕಾಲದಲ್ಲಿ ಹಾಜರು ಪಡಿಸಿರುವ ದಾಖಲಾತಿಗಳನ್ನು ತೋರಿಸಿ ಅವುಗಳಲ್ಲಿ ಎಂ.ಆರ್.23/1992-93 ಇದೆಯೇ ಪರಿಶೀಲಿಸಿ ಹೇಳಿ ಎಂದು ಸೂಚಿಸಿದಾಗ ಸಾಕ್ಷಿ ಅವುಗಳನ್ನು ಪರಿಶೀಲಿಸಿ ನೋಡಿ ನನಗೆ ಗೊತ್ತಾಗುತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಹಿಂದಿನ ಕೇಸ್ ಗಳಲ್ಲಿ, ಈ ಕೇಸ್ ನಲ್ಲಿ ಆಗಲಿ ಎಂ.ಆರ್.23/1993-93 ಅನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾತ ಬದುಕಿದ್ದ ಕಾಲದಲ್ಲಿ ತಮ್ಮ ಭಾಗಾಂಶದ ಆಸ್ತಿಗಳು ಯಾರಿಗೆ ಸೇರಬೇಕು ಎಂದು ಏನಾದರೂ ಪತ್ರ ಮಾಡಿ ಇಟ್ಟಿದ್ದಾರಾ ಎಂದರೆ ಸಾಕ್ಷಿ ಇಲ್ಲ ಆದರೆ ಸರ್ವೆ ನಂ.36 ಅನ್ನು ಭಾಗ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ತಾತ ನಂಜಾಚಾರಿ ತೀರಿಕೊಂಡ ನಂತರ ಅವರ ಹೆಂಡತಿ, ಅವರ ಹೆಣ್ಣು ಮಕ್ಕಳು, ಮೊಮ್ಮಕ್ಕಳು ಎಲ್ಲರೂ ಸೇರಿ ಅವರ ಭಾಗಾಂಶದ ಆಸ್ತಿಯನ್ನು ಭಾಗ ಏನಾದರೂ ಮಾಡಿಕೊಂಡಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಅವರು ಬದುಕಿದ್ದಾಗಲೇ ಮನೆಯಲ್ಲಿ ಪಂಚಾಯಿತಿ ಮಾಡಿ ಎರಡು ಭಾಗ ಮಾಡಿ ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ.

ನಿಡಿ.24 ರಿಂದ ನಿಡಿ.34 ದಾಖಲಾತಿಗಳನ್ನು ಮಾಡುವ ಕಾಲಕ್ಕೆ ನಂಜಾಚಾರಿಯವರ ಹೆಂಡತಿ ಮಕ್ಕಳಿಗೆ ನೋಟೀಸ್ ಏನಾದರೂ ಕೊಟ್ಟಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ತಾಯಿಯ ಹೆಸರಿಗೆ ಆಗಿರುವ ಖಾತೆಗಳು ನನ್ನ ತಂದೆ ಹೆಸರಿನಿಂದ

ವರ್ಗಾವಣೆ ಆಗಿರುವುದು ಎಂದರೆ ಸರಿ. ಆ ರೀತಿ ಖಾತೆ ವರ್ಗಾವಣೆ ಆಗುವ ಕಾಲಕ್ಕೆ 1 ನೇ ವಾದಿ ಗೌರಮ್ಮರವರ ಬಳಿ ಕೇಳಿದ್ದೀರಾ ಎಂದರೆ ಸಾಕ್ಷಿ ಕೇಳಿಲ್ಲ, ಅದು ನಮ್ಮ ತಂದೆ ಮತ್ತು ತಾತನ ಆಸ್ತಿಯಾಗಿರುವ ಕಾರಣ ನಾವು ಕೇಳಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ.24 ರಿಂದ ನಿಡಿ.34 ದಾಖಲಾತಿಗಳಲ್ಲಿ ನಿಮ್ಮ ತಾಯಿಯ ಹೆಸರಿಗೆ ವರ್ಗಾವಣೆ ಆಗಿರುವ ದಾಖಲಾತಿಗಳನ್ನು ಹೊರತುಪಡಿಸಿ ಉಳಿದ ದಾಖಲಾತಿಗಳು ನಿಮ್ಮ ತಂದೆ ಬದುಕಿದ್ದಾಗಲೇ ಆಗಿರುವ ದಾಖಲಾತಿಗಳು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಕಾಲದಲ್ಲಿ ಆಗಿರುವಂತಹ ಈ ಎಲ್ಲಾ ದಾಖಲಾತಿಗಳು ಸೃಷ್ಟಿತ ದಾಖಲಾತಿಗಳು ಎಂದು ಹಳೆಯ ಅಸಲು ದಾವೆ 100/1993 ಹೊಸ ನಂಬರ್ 29/2002 ಕಾಲದಿಂದಲೂ ಪ್ರಶ್ನಿಸಿಕೊಂಡೇ ಬಂದಿದ್ದಾರೆ ಎಂದರೆ ಸಾಕ್ಷಿ ನಮ್ಮ ತಂದೆ ಹಾಜರು ಪಡಿಸಿರುವ ದಾಖಲಾತಿಗಳು ಎಲ್ಲವೂ ಅಸಲಿ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಬದುಕಿದ್ದಾಗಲೇ ಅವರೇ ನಿಂತು ವಿವಿಧ ವಾದಿಗಳಿಗೆ ಮೋಸ ಮಾಡಿ ಅವರ ಮತ್ತು ಅವರ ತಮ್ಮನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಹೆಸರಿನಿಂದ ತಾಯಿಯ ಹೆಸರಿಗೆ ವರ್ಗಾವಣೆ ಆಗಿರುವ ಸ್ವತ್ತುಗಳ ದಾಖಲಾತಿಗಳು ಸಹಾ ಈ ದಾವೆಯ ತೀರ್ಪಿಗೆ ಒಳಪಡುತ್ತವೆ ಎಂದರೆ ಸಾಕ್ಷಿ ನಮ್ಮ ತಂದೆ ತೀರಿಕೊಂಡ ನಂತರ ಪೌತಿ ಖಾತೆ ಮೂಲಕ ವರ್ಗಾವಣೆ ಆಗಿದೆ ಎಂದು ಉತ್ತರಿಸುತ್ತಾರೆ. ನೀವು ಹಾಜರು ಪಡಿಸಿರುವ ಸಾಲದ ದಾಖಲಾತಿಗಳು ಸರ್ಕಾರಿ ಸವಲತ್ತುಗಳನ್ನು ಪಡೆದು ಕೊಳ್ಳಲು ಮಾಡಿಕೊಂಡ ದಾಖಲಾತಿಗಳು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಭಾಗ ಆದ ನಂತರ ಬೆಳೆ ಬೆಳೆಯುವ ಉದ್ದೇಶದಿಂದ ಬೆಳೆ ಸಾಲ ಪಡೆಯುವ ಉದ್ದೇಶದಿಂದ ಸಾಲ ಪಡೆದಿರುತ್ತೇವೆ ಎಂದು ಹೇಳುತ್ತಾರೆ. ಸಾಲವನ್ನು ಗ್ರಾಮದ ಸಹಕಾರಿ ಸಂಘದಲ್ಲಿ ಮಾಡಿರುವಂತದ್ದು ಎಂದರೆ ಸರಿ. ಸದರಿ ಸಹಕಾರ ಸಂಘದಲ್ಲಿ ಪಡೆದಿರುವ ಸಾಲಗಳು ಪ್ರತಿ ವರ್ಷ ನವೀಕರಣ ಆಗುತ್ತವೆ ಎಂದರೆ ಸಾಕ್ಷಿ ಪ್ರತಿ ವರ್ಷ ಸಾಲ ಮರುಪಾವತಿ ಮಾಡಿದರೆ ಮಾತ್ರ ನವೀಕರಣ ಆಗುತ್ತದೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ಬದುಕಿದ್ದ ಕಾಲದಲ್ಲಿ ನಿಮ್ಮ ತಾಯಿಯಾಗಲಿ ಸಹಕಾರಿ ಸಂಘದಲ್ಲಿ ಪಡೆದಿರುವ ಸಾಲವನ್ನು ತೀರುವಳಿ ಮಾಡಿದ್ದಾರಾ ಎಂದರೆ ಸಾಕ್ಷಿ ಸಾಲ ತೀರುವಳಿ ಮಾಡಿ ಪುನಃ ಸಾಲ ಪಡೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಈ ಸಾಲದ ದಾಖಲಾತಿಗಳನ್ನು ಸಹಾ ನಿಮ್ಮ ತಂದೆ ವಾದಿ ಗೌರಮ್ಮನವರಿಗೆ ಮತ್ತು ಅವರ ಹೆಣ್ಣು ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದಲೇ ಸೃಷ್ಟಿ ಮಾಡಿರುತ್ತಾರೆ ಮತ್ತು ಅದನ್ನು ಅವರು ತೀರಿಕೊಂಡ ಬಳಿಕ ನಿಮ್ಮ ತಾಯಿ ಮತ್ತು ನೀವು ಮುಂದುವರೆಸಿಕೊಂಡು ಬರುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ಬದುಕಿದ್ದಾ ಕಾಲಕ್ಕೆ ಈ

ರೀತಿಯ ಸಾಲದ ದಾಖಲಾತಿಗಳನ್ನು ಮಾಡಲು ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿ ಅಧಿಕಾರವಿದೆ ಎಂದು ಉತ್ತರಿಸುತ್ತಾರೆ.

ನಿಡಿ.24 ರಲ್ಲಿ ದಕ್ಷಿಣಕ್ಕೆ ಮನುಬ್ರಹ್ಮಚಾರಿಯವರ ಆಸ್ತಿ ಎಂದು ನಮೂದಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಮನುಬ್ರಹ್ಮಚಾರಿಯವರ ಆಸ್ತಿಯ ಉತ್ತರಕ್ಕೆ ನನ್ನ ತಂದೆ ಪುಟ್ಟಸ್ವಾಮಿಯವರ ಸ್ವತ್ತು ಬರಬೇಕು. ನಿಡಿ.31 ರ ಪತ್ರದಲ್ಲಿ ಮನುಬ್ರಹ್ಮಚಾರಿಯವರ ಒಂದು ಎಕರೆ ಆಸ್ತಿಯ ಉ್ರತರಕ್ಕೆ ನಿಮ್ಮ ತಂದೆ ಪುಟ್ಟಸ್ವಾಮಿಯವರ ಸ್ವತ್ತು ಎಂದು ಬರೆದಿಲ್ಲ, ಬೋರಯ್ಯ ಎಂದು ಬರೆದಿದೆ ಎಂದರೆ ಸಾಕ್ಷಿ ಸುಳ್ಳು ಚೆಕ್ ಬಂದಿ ನೀಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಡಿ.24 ಮತ್ತು ನಿಡಿ.31 ದಾಖಲಾತಿಗಳು ಸಹಾ ನಿಮ್ಮ ತಂದೆ ನಿಂತು ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಮಾಡಿಸಿರುವ ದಾಖಲಾತಿಗಳು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ಹಾಜರು ಪಡಿಸಿರುವ ದಾಖಲಾತಿಗಳು ವಾದಿಯರ ಭಾಗಾಂಶದ ಹಕ್ಕನ್ನು ಬದ್ಧಪಡಿಸುವುದಿಲ್ಲ, ಅವರೆಲ್ಲರಿಗೂ ದಾವಾ ಸ್ವತ್ತುಗಳಲ್ಲಿ ಸಮ ಭಾಗಾಂಶದ ಹಕ್ಕು ಇದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಸತ್ಯವನ್ನೇ ನುಡಿಯುತ್ತಿದ್ದೇನೆ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.